ಜೋತು ಬಿದ್ದು... ಕೂಡಿಟ್ಟಿದ್ದನ್ನೆಲ್ಲಾ ಕಳೆದುಕೊಂಡು ಕೈ ಖಾಲಿ ಮಾಡಿಕೊಂಡಿದ್ದಾಗಿದೆ. ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆಯೇ ಹೊರತು ಚೇತರಿಸಿಕೊಳ್ಳುವ ಲಕ್ಷಣ ಕಾಣಿಸುತ್ತಿಲ್ಲ. ರಾಜೀವ ಉದ್ಯೋಗ ಮಾಡುತ್ತಿದ್ದ ಹೋಟೆಲು ನಗರದ ಉದ್ದಿಮೆ, ವಹಿವಾಟುಗಳ ಕೇಂದ್ರಸ್ಥಾನದಲ್ಲಿದ್ದು ಸದಾ ಜನ ಗಿಜಿಗುಡುತ್ತಿದ್ದರು. ಝಣಝಣ ಕಾಂಚಾಣ ಎಣಿಸಿಕೊಳ್ಳುತ್ತಾ ಭದ್ರವಾಗಿ ನೆಲೆಯೂರಿತ್ತು ಹೋಟೆಲು. ಇಂತಾ ಹೋಟೆಲಿನಲ್ಲಿ ಮ್ಯಾನೇಜರ್ ಹುದ್ದೆ ನಿರ್ವಹಿಸುತ್ತಿದ್ದೇನೆ ಎನ್ನುವುದು ರಾಜೀವನಿಗೆ ಹೆಮ್ಮೆ, ಅಭಿಮಾನ. ಹೋಟೆಲ್ ಮಾಲೀಕರು ಇವನ ಮೇಲೆ ಸಂಪೂರ್ಣ ನಂಬುಗೆ ಇಟ್ಟಿದ್ದರು. ಆಗೀಗ ಅನಿವಾರ್ಯವಾದಾಗ ಗಲ್ಲಾಪೆಟ್ಟಿಗೆಯೆದುರು ಕೂತು ದುಡ್ಡು ಎಣಿಸಿಕೊಳ್ಳುವ ಕೆಲಸವೂ ರಾಜೀವನ ಪಾಲಿಗೆ ಬರುತ್ತಿತ್ತು. ಅವನು ಅದನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಾ ಮಾಲೀಕರ ಬಲಗೈ ಭಂಟ ಆಗಿದ್ದ. ಹೋಟೆಲಿನ ದಿನನಿತ್ಯದ ಅಗತ್ಯಕ್ಕೆ ಬೇಕಾದ ದಿನಸಿ ಸಾಮಗ್ರಿಗಳು, ಹಾಲು, ತರಕಾರಿ ಪ್ರತಿಯೊಂದನ್ನೂ ಪೂರೈಸುವುದರಿಂದ ತೊಡಗಿ ಕೆಲಸಗಾರರ ಮೇಲ್ವಿಚಾರಣೆ ವಹಿಸುವವರೆಗೆ ತಲೆಯ ಮೇಲೆ ಬಿದ್ದ ಜವಾಬ್ದಾರಿ. ಬಿಸಿರಕ್ತದ ತರುಣನಿಗೆ ಇವೆಲ್ಲಾ ಕೆಲಸಗಳು ದೊಡ್ಡ ಕಷ್ಟ ಅನಿಸದೆ ಎಲ್ಲವೂ ತಾನು ಮೇಲೇರಲು ಇರುವ ಮೆಟ್ಟಿಲುಗಳು ಎಂದು ದೃಢವಾಗಿ ನಂಬಿದ್ದ ರಾಜೀವ. ಊರುಮನೆ ಕಡೆಯ ಯುವಕನನ್ನು ಕರೆದುಕೊಂಡು ಬಂದು ಕೆಲಸ ಕೊಟ್ಟಿದ್ದು ಸಾರ್ಥಕವಾಯಿತೆಂದು ಯಜಮಾನರೂ ಸಂತೃಪ್ತರಾಗಿದ್ದರು. ರಾಜೀವ ತನ್ನ ಹೆಸರಿಗೆ ಮಸಿ ಹತ್ತದಂತೆ ನಿರ್ವಂಚನೆಯಿಂದ ಕೆಲಸ ಮಾಡಲು ಮತ್ತೊಂದು ಕಾರಣ ಇತ್ತು. ಆಗೀಗ ಯಜಮಾನರು ಹೇಳುತ್ತಿದ್ದ ಮಾತು. “ನಿನ್ನ ಹಾಗೆ ನಾನೂ ಯಾರದ್ದೋ ಹೋಟೆಲಿನಲ್ಲಿ ಲೋಟ ತೊಳೆದು ಮೇಲೆ ಬಂದೋನು ಕಣೋ. ಮೊದಲು ನಿಂಗೆ ಅನುಭವ ಬರ್ಲಿ. ಆಮೇಲೆ ನೀನೇ ಒಂದು ಹೋಟೆಲು ತೆಗೆದು...”

ಇಷ್ಟರಮಟ್ಟಿಗೆ ಪ್ರೋತ್ಸಾಹದ ಮಾತಾಡುತ್ತಿದ್ದ ಯಜಮಾನರು ತನ್ನ ಆ ಹೋಟೆಲಿಗೆ ಬೇಕಾದ ಮೂಲ ಅಗತ್ಯಗಳನ್ನು ಪೂರೈಸಿಕೊಟ್ಟಾರು ಎಂದು ರಾಜೀವನ ನಂಬಿಕೆ. ಅದೂ ಬೇಡ, ಪರಿಚಯವಿರುವ ಬ್ಯಾಂಕಿನ ಜನಕ್ಕೆ ಒಂದು ಮಾತು ಹೇಳಿದರೂ ಸಾಕು. ಸಾಲ ಸಿಗದೆ ಇರುವುದಿಲ್ಲ. ದೇವರು ಕೃಪೆ ತೋರಿಸಿದರೆ ‘ಮ್ಯಾನೇಜರ್’ ಎನ್ನುವ ಹೆಸರಿನಿಂದ ರಟ್ಟೆಮುರಿ ಗೈಯುತ್ತಿದ್ದವನು ‘ಪ್ರೊಪ್ರೈಟರ್’ ಅನಿಸಿಕೊಳ್ಳುವುದು ಅಸಾಧ್ಯವಾಗಲಿಕ್ಕಿಲ್ಲ. ಅನುಭವ ಇದೆ ತನಗೆ. ಕೂಲಿಗೆ ಬಂದವರನ್ನು ನಿಭಾಯಿಸುವ ಜಾಣ್ಮೆ ಇದೆ. ಚಾಕಚಕ್ಯತೆ ಇದೆ.

‘ಭೇಷ್’ ಎಂದು ಬರಿದೇ ಬೆನ್ನು ತಟ್ಟುತ್ತಿರಲಿಲ್ಲ ಯಜಮಾನರು. ಕೈತುಂಬಾ ಸಂಬಳ ಕೊಡುತ್ತಿದ್ದರು. ‘ದುಡಿದಿದ್ದರಲ್ಲಿ ಒಂದಿಷ್ಟಾದರೂ ಉಳಿಸೋಕೆ ನೋಡು...’ ಎನ್ನುವ ಅವರ ಬುದ್ಧಿಮಾತನ್ನು ಎದೆಗೂಡಿನಲ್ಲಿ ಭದ್ರವಾಗಿ ಕಾಪಿಟ್ಟುಕೊಂಡಿದ್ದ ರಾಜೀವ. ಬ್ಯಾಂಕಿನಲ್ಲಿ ಜಮೆಯಾಗುತ್ತಿದ್ದ ಪುಟ್ಟ ಗಂಟನ್ನು ನೋಡಿ ಸಹಜವಾಗಿ ಪುಳಕಗೊಳ್ಳುತ್ತಿದ್ದ ಯುವಕನಿಗೆ ತಂಗಿಯ ಮದುವೆ ಭ್ರಮನಿರಸನಗೊಳಿಸಿತು. “ದುಡ್ಡೇನಾದ್ರೂ ಇಟ್ಟಿದೀಯಾ? ಈ ಕಾಲದಲ್ಲಿ ಮದುವೆ ಅಂದ್ರೆ ಸಸಾರ ಅಲ್ಲ...” ಅಣ್ಣ ಬಾಯ್ಬಿಟ್ಟು ಕೇಳಿದ್ದ. ‘ಇಲ್ಲ’ ಎಂದು ಸುಳ್ಳಾಡಲು ಬಾಯಿ ಬಂದಿರಲಿಲ್ಲ. ತಂಗಿಯ ಬಗ್ಗೆ ಅವನಿಗೂ ಅಪಾರವಾದ ಪ್ರೀತಿ ಇತ್ತು. ಕರ್ತವ್ಯದೃಷ್ಟಿ ಇತ್ತು. ಕೂಡಿಟ್ಟ ಹಣವನ್ನೆಲ್ಲಾ ಅಣ್ಣನ ಕೈಗಿತ್ತು ಖಾಲಿಯಾಗಿದ್ದ. ‘ತಂಗಿಯ ಮದುವೆಯಾಯ್ತು. ಇನ್ಯಾವ ಜವಾಬ್ದಾರಿಗಳಿಲ್ಲ’ ಎನ್ನುವ ನಿಶ್ಚಿಂತೆ. ಮತ್ತೆ ಎರಡು ವರ್ಷ ಅನ್ನುವುದರಲ್ಲಿ ಅವನಿಗೂ ಮದುವೆ ಗೊತ್ತಾಗಿ ನರ್ಮದಾ ಮನೆ ತುಂಬಿದ್ದಳು. ಚಿಕ್ಕಪುಟ್ಟ ಸಂಸಾರವಾದರೂ ಖರ್ಚು ಕಡಿಮೆ ಇರಲಿಲ್ಲ. ಅಷ್ಟು ವರ್ಷ ಹೋಟೆಲನ್ನೇ ಮನೆಯಾಗಿಸಿಕೊಂಡಿದ್ದವನು ಸಣ್ಣದೊಂದು ಮನೆ ಬಾಡಿಗೆಗೆ ಹಿಡಿಯಬೇಕಾಯ್ತು. ಅಗತ್ಯವಾದ ಪಾತ್ರೆಪರಡಿಗಳು, ಹಾಸಿಗೆ, ಬಟ್ಟೆಗಳು, ಮನೆ ಅಂದ ಮೇಲೆ ಯಾವುದು ಬೇಡ?